


International Journal of Kannada Research
www.kannadajournal.com

ISSN: 2454–5813
IJSR 2016; 2(1): 20-21
© 2016 IJKS
www.kannadajournal.com
Received: 06-11-2015
Accepted: 07-12-2016

**Renuka Sidramappa**
Assistant Proffesor,
Department of Music,
HKES'S Smt. V.G.Degree
College For Women, Kalaburagi-585103.

**Correspondence**
**Renuka Sidramappa**
Assistant Proffesor,
Department of Music,
HKES'S Smt. V.G.Degree
College For Women, Kalaburagi-585103.

# ಗ್ವಾಲಿಯರ ಘರಾನೆಯ ಗಾಯಕ ಪಂಡಿತ ಮಾಣಿಕರಾವ ರಾಯಚೂರಕರ

**Renuka Sidramappa**

ಸಾಂಸ್ಕೃತಿಕವಾಗಿ ಹಿಂದುಳಿದ ಪ್ರದೇಶವೆಂದೆ ಹೆಸರಾಗಿರುವ ಹೈದ್ರಾಬಾದ ಕರ್ನಾಟಕ ಈಗ ತನ್ನ ನಿಲುವನ್ನು ಬದಲಿಸುತ್ತಾ ಎಲ್ಲರ ದೃಷ್ಠಿಕೋನವನ್ನು ತನ್ನಡಗೆ ಸೆಳೆಯುತ್ತಾ ದಾಪುಗಾಲು ಹಾಕುತ್ತಿರುವುದು ಸಂತೋಷದ ವಿಷಯ. ಇಲ್ಲಿ ಸಂಪನ್ಮೂಲಕ್ಕೆ ಕೊರತೆ ಇಲ್ಲ. ಆದರೆ ಈ ಭಾಗದಲ್ಲಿ ಕಲೆ, ಕಲಾವಿದರ ಕೊಡುಗೆ ಬೇಕಾದಷ್ಟಿದೆ. ಆದರೆ ಇತಿಹಾಸದ ಪುಟಗಳಲ್ಲಿ ಅವಿತುಕೊಂಡತಹ ಕಲಾವಿದರನ್ನು ಪರಿಚಯಿಸುವುದು ಅವಶ್ಯಕವಾಗಿದೆ. ಅವರ ಸಾಧನೆ ಕುರಿತು ಬೆಳಕುಚೆಲ್ಲುವ ಕೆಲಸ ನಡೆಯಬೇಕಾಗಿದೆ.

ಕಲ್ಲು ಬಂಡೆಗಳು, ಗುಡ್ಡಗಾಡಿನ ಸೌಂದರ್ಯಕ್ಕೆ ಪ್ರಸಿದ್ದಿಯನ್ನು ಪಡೆದ ರಾಯಚೂರು ಜಿಲ್ಲೆ ಆ ಸುಡುಬಿಸಿಲಿನ ಪ್ರಕೋಪಕ್ಕನುಗುಣವಾಗಿ ತಂಪನ್ನೆರೆಯುವ ಶಾಸ್ತ್ರೀಯ ಸಂಗೀತಗಾರರು, ಸೂಫಿಗಾಯಕರು, ರಸದೌತಣವನ್ನು ಉಣಬಡಿಸುವ ಮಹಾನ್ ಕವಿಗಳು, ಚಿತ್ರಕಲಾವಿದರು. ವಿಮರ್ಶಕರು, ಹಾರ್ಮೋನಿಯಂವಾದಕರು ಹೀಗೆ ಗಣ್ಯಾತಿಗಣ್ಯ ವ್ಯಕ್ತಿಗಳನ್ನು ನೀಡಿದಂತಹ ಕೀರ್ತಿರಾಯಚೂರು ಜಿಲ್ಲೆಯದು.

ಇಂತಹ ಪರಂಪರೆಯುಳ್ಳ ವಾತಾವರಣದಲ್ಲಿ ದಿನಾಂಕ: 12 ಡಿಸೆಂಬರ 1921 ರಂದು ಶ್ರೀಮತಿ ಜಿಂದಮ್ಮ ಮತ್ತು ಶ್ರೀ ಯಲ್ಲಪ್ಪ ದಂಪತಿಗಳ ಪುತ್ರನಾಗಿ ಜನಿಸಿದವರೆ ಪಂ. ಮಾಣಿಕರಾವ ರಾಯಚರೂರಕರ. ಶೈಕ್ಷಣಿಕವಾಗಿ ನಾಲ್ಕನೇಯ ತರಗತಿಯವರೆಗೆ ಉರ್ದುಭಾಷೆಯಲ್ಲಿ ಶಿಕ್ಷಣ ಪಡೆದರು. ತಮ್ಮ ಸೋದರಮಾವನರು ಹಾಡುತ್ತಿದ್ದರು. ಅದರಿಂದ ಡಾ॥ ಮಾಣಿಕರಾವ ಅವರಿಗೆ ಸಂಗೀತದ ವಾತಾವರಣ ಮನೆಯಿಂದಲೇ ಸಿಕ್ಕಂತಾಗಿತ್ತು. ಸಮಯಸಿಕ್ಕಾಗ ಅವರ ಮಾನವರ ಹತ್ತಿರ ಸಂಗೀತ ಪಾಠ ಹೇಳಿಸಿಕೊಂಡಿದ್ದರು. ಚಿಕ್ಕವಯಸ್ಸಿನಲ್ಲಿಯೇ ಕಾರಕೂನ ಕೆಲಸಕ್ಕೆ ಸೇರಿಕೊಂಡು ಅಲ್ಲಿ ಲೆಕ್ಕ ಬರೆಯುವ ಕೆಲಸ ಮಾಡುತ್ತಿದ್ದರು. ಕೆಲವೊಂದುಸಲ ಹಣ ವಸೂಲಿಗೂ ಹೋಗುತ್ತಿದ್ದರು. ಒಂದು ದಿವಸ ಅವರ ಮಾಲಿಕರು ತಮ್ಮ ಗ್ರಾಹಕರಲ್ಲಿ ಹಣ ವಸೂಲಿಗಾಗಿ ರಾಯಚೂರಕರ ಅವರನ್ನು ಕಳಿಸಿದರು. ಹಣ ವಸೂಲಿಗೆ ಹೋದಾಗ ಆಕಾಶವಾಣಿಯಲ್ಲಿ ಶಾಸ್ತ್ರೀಯ ಸಂಗೀತ ಕೇಳಿ ಬರುತ್ತಿತ್ತು ಅದನ್ನು ಕೇಳುತ್ತಾ ಮೈಮರೆತ ರಾಯಚೂರಕರ ಅಲ್ಲಿಯೇ ಕುಳಿತರು. ಆ ಸಂಗೀತಕ್ಕೆ ಮನಸೋತು ತಾವು ಬಂದ ಕೆಲಸ ಮರೆತು ಹಾಗೆಯೇ ಮರಳಿ ಹೋದಾಗ ಅವರ ಮಾಲಿಕನ ಸಿಟ್ಟು ಮುಗಿಲುಮಟ್ಟಿತ್ತು. ಮಾಲಿಕನಿಂದ ಅವಹೇಳನಕ್ಕೆ ಒಳಗಾದ ಮೇಲೆ ತಾನು ಮುಂದೊಂದು ದಿವಸ ದೊಡ್ಡ ಸಂಗೀತರಾಗನಾಗಿಯೇ ರಾಯಚೂರಿಗೆ ಮರುಳಬೇಕು. ಅಲ್ಲಿಯವರೆಗೆ ತಾವು ಹಿಂದಿರುಗಬಾರದೆಂದು ಛಲದೊಂದಿಗೆ ಮನೆಯಲ್ಲಿ ಯ್ಯಾರಿಗೂ ತಿಳಿಸದೆ ಮನೆಬಿಟ್ಟು ಹೋದರು. ಮುಂದೆ ಪಂಢರಾಪೂರದ ಪಂಡಿತ ಜಗನ್ನಾಥಬುವಾ ಪಂಢರಾಪೂರಕರ ರವರ ಹತ್ತಿರ ವಿದ್ಯಾರ್ಜನೆಗಾಗಿ ಪಂಢರಪೂರಕ್ಕೆ ಹೋದರು.

ಹೀಗೆ ಡಾ॥ ಮಾಣಿಕರಾವ ಅವರ ಸಂಗೀತ ಕಲೆಯುವ ಯಾತ್ರೆ ಆರಂಭವಾಯಿತು. ಮುಂಚೆಯೇ ಸೋದರ ಮಾವನವರಾದ ಪಂ. ಜೆ. ನಾಗಾಶಾಸ್ತ್ರಿಯವರ ಬಳಿ ಪ್ರಾರಂಭಿಕ ಸಂಗೀತ ಶಿಕ್ಷಣ ಪಡೆದುಕೊಂಡಿದ್ದರು. ಮುಂದೆ ಪಂ. ಜಗನ್ನಾಥಬುವಾ ಪಂಢರಪುರಕರ ಅವರ ಬಳಿ ಸಂಗೀತ ಅಭ್ಯಾಸ ಪ್ರಾರಂಭಿಸಿದರು. ಅಲ್ಲಿಯೇ ಕೆಲವು ಮನೆಗಳಲ್ಲಿ ಮದುಕರಿ ಮಾಡಿಕೊಂಡು ಪಾಠಕ್ಕೆ ಗುರುಗಳ ಮನೆಗೆ ಹೋಗುವ ವಾಡಿಕೆ ಇತ್ತು. ನಸುಕಿನಲ್ಲಿಯೆ ತಂಬೂರಿಯ ತಂತಿಗಳನ್ನು ಮಿಟುತ್ತಾ ಗುರುವಿನ ಜೋತೆಗೆ ಷಡ್ಜದ ಸಾಧನೆ ನಡೆಸಿದರು. ಕೆಲವೊಮ್ಮೆ ಅಭ್ಯಾಸಕ್ಕೆ ಕುಳಿತಾಗ ನಿದ್ದೆ ಬಂದರೆ ಕಪಾಳಮೊಕ್ಷ ಕೂಡ ಮಾಡಿಸಿಕೊಂಡಿದ್ದು ಉಂಟು. ಅದನ್ನು ಸದಾ ತಾವೇ ಹೇಳುತ್ತಿದ್ದರು. ಹೀಗೆ ಕಠಿಣ ಪರಿಶ್ರಮದಿಂದ ಗುರುಗಳ ಮನಸ್ಸನ್ನು ಗೆದ್ದುಕೊಂಡು ಮುಂದೆ ಅವರ ಮನೆಯಲ್ಲಿಯೇ ಮನೆಯ ಮಗನಂತೆ ಬೆಳೆದು ಸಂಗೀತ ಶಿಕ್ಷಣ ಪಡೆದುಕೊಂಡರು. ಅಲ್ಲಿಂದ ಮುಂದೆ ಮುಂಬೈಯ ಆಕಾಶವಾಣಿಯಿಂದ ತಮ್ಮ ಕಾರ್ಯಕ್ರಮ ನೀಡಿದಾಗ ಆ ಕಾರ್ಯಕ್ರಮ ರೇಡಿಯೋದಲ್ಲಿ ಪ್ರಸಾರವಾಗುತ್ತಿದೆ. ನೀವುಗಳು ಕೇಳಬೇಕು ಎಂದು ತಮ್ಮ ಊರಿಗೆ ಪತ್ರ ಬರೆದರು. ಈ ವಿಷಯ ತಿಳಿದ ಕುಟುಂಬದವರು ಮಗನ ವಿಷಯ ಕೇಳಿ ಹಬ್ಬದ ಅನುಭವನ ಅನುಭವಿಸಿದರು, ಅಲ್ಲಿಯತನಕ ಮಗನಿಗಾಗಿ ಹುಡುಕಿ ಮಗನ ಆಸೆಯೆ ಬಿಟ್ಟಿದ್ದರು.

ಡಾ॥ ಮಾಣಿಕರಾವ ರಾಯಚೂರಕರ ಅವರು ತುಂಬಾ ಮಿತಭಾಷಿಕರು, ಯ್ಯಾರೊಂದಿಗೂ, ಸಲುಗೆಯಿಂದ ಇರಬಯಸದೆ ಸದಾ ಸಂಗೀತದಲ್ಲಿಯೇ ಮಗ್ನರಾಗಿರುತ್ತಿದ್ದರು.

ಶ್ವೇತವರ್ಣದ ಉಡುಗೆಯನ್ನು ಹೆಚ್ಚು ಧರಿಸುತ್ತಿದ್ದರು ಮತ್ತು ಇಷ್ಟಪಡುತ್ತಿದ್ದರು. ಸದಾ ರಾಮರಾಮ ಕೃಷ್ಣ ಕೃಷ್ಣವೆಂದು ಉಚ್ಚರಿಸುತ್ತಿದ್ದರು. ಕಲಬುರಗಿ ಆಕಾಶವಾಣಿಗೆ ರೇಕಾರ್ಡಿಂಗ್‌ಗಾಗಿ ಬಂದಾಗ ಅಲ್ಲಿಯ ನಿಲಯದ ಕಲಾವಿದರು ತುಂಬಾ ಸಂತಸ ವ್ಯಕ್ತ ಪಡಿಸುತ್ತಿದ್ದರು. ತಬಲಾವಾದನದಲ್ಲಿ ಎ ಟಾಪ್ ಶ್ರೇಣಿಯ ಕಲಾವಿದರಾದ ಪಂ. ಶಾಂತಲಿಂಗ ದೇಸಾಯಿ ಕಲ್ಲೂರ ಅವರು ರಾಯಚೂರಕರ ಅವರನ್ನು ಕುರಿತು "ಬುವಾ ನಿಮ್ಮೊಂದಿಗೆ ಕಾರ್ಯಕ್ರಮ ನೀಡಿದರೆ ನನಗೆ ತಬಲಾ ನುಡಿಸಿದಂತೆ ಆಗುತ್ತೆ ನಿಮ್ಮ ಹಾಗೇ ಹಾಡುವ ಗಾಯಕರು ತುಂಬಾ ವಿರಳವೆಂದು" ಮೆಚ್ಚುಗೆ ವ್ಯಕ್ತಪಡಸಿದರು. ತಮ್ಮ ಜೀವ ಮಾನದುದ್ದಕ್ಕೆ ಯ್ಯಾರಿಗೂ ಒಂದು ಕಾರ್ಯಕ್ರಮ ಕೊಡಿ ಅಂತ ಕೇಳಿಲ್ಲ ಹೀಗೆ ತುಂಬಾ ಸ್ವಾಭಿಮಾನದ ಸರಳ ಜೀವನ ಅವರದಾಗಿತ್ತು.

ಪಂ. ಮಾಣಿಕರಾವ ರಾಯಚೂರಕರ ಅವರು ದೇಶಾದ್ಯಂತ ಅನೇಕ ಯಶಸ್ವಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅವುಗಳಲ್ಲಿ ದೆಹಲಿ, ಕಲ್ಕತ್ತಾ, ರಾಜಕೋಟ್, ಮದ್ರಾಸ್, ಅಹಮದಾಬಾದ, ಪುನಾ, ಮಥುರಾ, ಇಂದೋರ, ಗ್ವಾಲಿಯರ್, ಭೂಪಾಲ್, ಮೈಸೂರ ದಸರಾ, ಸವಾಯಿಗಂಧರ್ವ ಅವರ ಪುಣ್ಯತಿಥಿ ಕುಂದಗೋಳ್, ಹೀಗೆ ನಾಡಿನಾದ್ಯಂತ ಸಂಗೀತ ಕಛೇರಿಗಳನ್ನು ನೀಡಿ ಗ್ವಾಲಿಯರ ಘರಾಣೆಯ ಒಬ್ಬ ಅದ್ಭುತ ಕಲಾವಿದರಾಗಿ ಮಿಂಚಿದರು.

ಪಂ. ರಾಯಚೂರಕರ ಅವರು ಗ್ವಾಲಿಯರ ಘರಾಣೆಯ ಅಪ್ರತಿಮಗಾಯಕರೆಂದು ಹೇಳಬಹುದು. ಅವರು ತಮ್ಮ ಆರಂಭದ ಸಂಗೀತ ಶಿಕ್ಷಣವನ್ನು ತಮ್ಮ ಸೋದರ ಮಾವನವರಾದ ಪಂ. ಜಿ. ನಾಗಾಶಾಸ್ತ್ರೀಯವರ ಬಳಿ ಪಡೆದರು. ಅಷ್ಟಕ್ಕೆ ಸಂತೃಪ್ತರಾಗದೆ, ಕಲಿಕೆಯ ದಾಹದಿಂದ ಪುಣಿಗೆ ಹೋದರು. ಅಲ್ಲಿಂದ ಪಂಢರಾಪುರದ ಪಂ. ಜಗನ್ನಾಥ ಬುವಾ ಪಂಢರಪುರಕರ ಅವರ ಬಳಿ ತಮ್ಮ ಉನ್ನತ ವ್ಯಾಸಂಗ ಪಡೆದುಕೊಂಡರು. ಅಲ್ಲಿ ಆರು ವರ್ಷಗಳ ಕಾಲ ಗ್ವಾಲಿಯರ ಘರಾನೆಯಲ್ಲಿ ಸಾಧನೆ ಮಾಡುತ್ತಾರೆ. ಇವರು ತಮ್ಮ ಹತ್ತೊಂಬತ್ತನೇಯ ವಯಸ್ಸಿನಲ್ಲಿ ಮುಂಬೈಯ ಆಕಾಶವಾಣಿ ಕೇಂದ್ರದಿಂದ ತಮ್ಮ ಕಾರ್ಯಕ್ರಮ ನೀಡುತ್ತಾರೆ.

ಪಂ. ಮಾಣಿಕರಾವ ರಾಯಚೂರಕರ ಅವರಿಗೆ ಸಿಕ್ಕ ಪ್ರಶಸ್ತಿಗಳು ಅನೇಕಾನೇಕ ಅವುಗಳಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ ನೀಡುವ "ಗೌರವ ಡಾಕ್ಟರೇಟ್" ಪದವಿಯನ್ನು 2004ರಲ್ಲಿ ಆಗಿನ ಘನವೆತ್ತ ರಾಜ್ಯಪಾಲರಾದ ಶ್ರೀ ಟಿ.ಎನ್. ಚತುರ್ವೇದಿಯವರು ನೀಡಿ ಗೌರವಿಸಿದ್ದಾರೆ. 1960ರಲ್ಲಿ, ಗಾಯನಾಚಾರ್ಯ ಪ್ರಶಸ್ತಿ, 1968ರಲ್ಲಿ ಪಂಡಿತ ಪ್ರಶಸ್ತಿ 1972 ಸಂಗೀತ ಮಾಣಿಕ್ಯ ಪ್ರಶಸ್ತಿ, 1982-83 ರಲ್ಲಿ ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ ಪ್ರಶಸ್ತಿ, 1989ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 1998ರಲ್ಲಿ ಸಮಾಜ ಸೇವಾ ರತ್ನ, 2006ರಲ್ಲಿ ಸುವರ್ಣ ಕರ್ನಾಟಕ ರತ್ನ ಪ್ರಶಸ್ತಿ, 2006ರಲ್ಲಿ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ, ಎಂಬ ಬಿರುದು ಹೀಗೆ ಇನ್ನೂ ಅನೇಕ ಪ್ರಶಸ್ತಿಗಳಿಗೆ ಬಾಜನರಾಗಿರುವ ಶ್ರೀಯುತರು ನಾಡು ಕಂಡ ಮಹಾನ ಗಾಯನಾಚಾರ್ಯರೆಂದು ಹೇಳಬಹುದು.

ಪಂ. ಮಾಣಿಕರಾವ ರಾಯಚೂರಕರ ಅವರು ಅನೇಕ ಶಿಷ್ಯರಿಗೆ ತಮ್ಮ ಸಂಗೀತವನ್ನು ಧಾರೆಯರೆದಿದ್ದಾರೆ. ಅವರುಗಳಲ್ಲಿ ಪ್ರಮುಖರಾದವರೆಂದರೆ ಮದ್ರಾಸಿನ ಶ್ರೀಮತಿ ಲೀಲಾ ಶಿವರಾವ, ನಳಿನಿ ಕತ್ರಿ ರಾಯಚೂರಿನ ಶ್ರೀ ಮನೋಹರಸಿಂಗ್ ಚಂದೇಲಿ, ಶ್ರೀಮತಿ ಶೋಭಾ ಹುಣಸಿಗಿ, ಶ್ರೀ ಡಿ.ಕೆ. ಹೆಬಸೂರ, ಶ್ರೀ ಸೂಗುರೇಶ ಅಸ್ಕಿಹಾಳ, ಶ್ರೀ ಜಿ. ಇಬ್ರಾಹಿಂ, ಶ್ರೀಮತಿ ನಾಗಲಾಂಬಿಕಾ ಚಂದ್ರಶೇಖರ ಬೀದರಿನ, ಶ್ರೀ ಜಿ. ವೀರಭದ್ರಪ್ಪ ಹಾಗೂ ಶ್ರೀಮತಿ ರೇಣುಕಾ ಹಾಗರಗುಂಡಗಿ ಮುಂತಾದ ಶಿಷ್ಯರು ಡಾ. ಮಾಣಿಕರಾವ ರಾಯಚೂರಕರ ರವರ ಮಾರ್ಗದರ್ಶನದ ಪಡೆದು ಪರಂಪರೆಯನ್ನು ಉಳಿಸಿ ಬೆಳೆಸುತ್ತಿದ್ದಾರೆ.

**ಅಡಿ ಟಿಪ್ಪಣಿಗಳು**

ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪ್ರಕಡಗೊಂಡ ಲಲಿತ ಕಲೆಗಳ ಸಂಪುಟ ಸಂಪಾದಕರು ಡಾ. ಪಿ.ಕೆ.ಖಂಡೋಬಾ, ಡಾ. ಎಸ್.ಸಿ.ಪಾಟೀಲ - ಪುಟ ಸಂಖ್ಯೆ: 377, 378.